ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ. (Higher AGP) ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ : 24.12.2009ರ ಸಂಖ್ಯೆ: ಇಡಿ 37 ಯುಎನ್ಇ 2009ರ ಆದೇಶ.
2. ಯು.ಜಿ.ಸಿ.ಯ ದಿನಾಂಕ :30.06.2010ರ ಸಂಖ್ಯೆ : ಎಫ್3-1/ 2009 ರ ನಿಯಮಗಳು.
3. ಯು.ಜಿ.ಸಿ. ಅರೆ ಸರ್ಕಾರಿ ಪತ್ರ ಸಂಖ್ಯೆ: ಎಫ್1.2/ 2009 (EC/PS)V(i)vol-II. ದಿ:14.06.2013 ರೊಂದಿಗೆ ಲಗತ್ತಿಸಿರುವ ದಿ:13.06.2013ರ ಯು.ಜಿ.ಸಿ. ನಿಯಮಗಳ ತಿದ್ದುಪಡಿ ಆದೇಶ.
4. ಸರ್ಕಾರದ ದಿನಾಂಕ : 25.09.2014ರ ಸಂಖ್ಯೆ: ಇಡಿ 382 ಯುಎನ್ಇ 2012ರ ಆದೇಶ.
5. ಸರ್ಕಾರದ ದಿನಾಂಕ : 19.09.2007 ರ ಸಂಖ್ಯೆ:ಇಡಿ/200/ ಯುಎನ್ಇ/2003ರ ಸುತ್ತೋಲೆ.
6. ಸರ್ಕಾರದ ದಿನಾಂಕ : 19.12.2011 ಹಾಗೂ ದಿನಾಂಕ : 05.05.2015 ರಸಂಖ್ಯೆ: ಇಡಿ/242/ಡಿಸಿಇ/2011 ರ ಪತ್ರ..
7. ಈ ಕಛೇರಿಯ ದಿನಾಂಕ : 19.05.2015 ರ ಸಂಖ್ಯೆ: ಕಾಶಿಇ/27/ಸಿಎಎಸ್/2010-11/ಬಸ್ಥಾವಿ ಹಾಗೂ ದಿ:03.10.2015 ಮತ್ತು 31.10.2015ರ ಸಂಖ್ಯೆ : ಕಾಶಿಇ/16/ಸಿಎಎಸ್/2015-16/ಬಸ್ಥಾವಿ ರ ಸುತ್ತೋಲೆಗಳು.
8. ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಸ್ವೀಕೃತವಾಗಿರುವ ಪ್ರಾಂಶುಪಾಲರ ಹಂತದ ಪರಿಶೀಲನಾ ಸಮಿತಿಯ ವರದಿಗಳು ಹಾಗೂ ಪ್ರಸ್ತಾವನೆಗಳು.

* * * *

<u>ಪ್ರಸ್ತಾವನೆ :</u>

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅರ್ಹ ಸಹಾಯಕ ಪ್ರಾಧ್ಯಾಪಕರು, ಹಾಗೂ ಗ್ರಂಥಪಾಲಕರುಗಳಿಗೆ ಉಲ್ಲೇಖ (1)ರನ್ವಯ 2006ರ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ (ರೂ.15,600-39,100) ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ.ಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2)ರ ಯು.ಜಿ.ಸಿ. ನಿಯಮಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ.ಗೆ ಸ್ಥಾನೀಕರಣ ನೀಡುವ ಸಂಬಂಧ ಯು.ಜಿ.ಸಿ.ಯು ಅನುಬಂಧ-3ರ ಟೇಬಲ್-1ರ ಕೆಟಗರಿI, II ಮತ್ತುIII ಗಳಿಗೆ ಉಲ್ಲೇಖ (3)ರಲ್ಲಿ ತಿದ್ದುಪಡಿ ಆದೇಶ ಹೊರಡಿಸಲಾಗಿರುತ್ತದೆ. ಆದರೆ ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಸಂಬಂಧಿಸಿದಂತೆ ಉಲ್ಲೇಖ (2)ರಲ್ಲಿನ ಯು.ಜಿ.ಸಿ. ಮಾರ್ಗಸೂಚಿಗಳು ಮುಂದುವರೆದಿರುತ್ತದೆ.

ಸರ್ಕಾರಿ ಆದೇಶ ಮತ್ತು ಯು.ಜಿ.ಸಿ.ಯ ಉಲ್ಲೇಖ (1) ರಿಂದ (3)ರವರೆಗಿನ ಆದೇಶಗಳನ್ವಯ 2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ.ಗೆ ವೃತ್ತಿಪದೋನ್ನತಿ (Career Advancement Scheme) ಮಂಜೂರು ಮಾಡಲು ಉಲ್ಲೇಖ (4)ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (6) ರವರೆಗಿನ ಯುಜಿಸಿ ಮಾರ್ಗಸೂಚಿ, ಸರ್ಕಾರದ ಆದೇಶ ಮತ್ತು ಪತ್ರಗಳ ಪ್ರಕಾರ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ರೂ. 6000/- ರಿಂದ ರೂ. 7000/-ಕ್ಕೆಎ.ಜಿ.ಪಿ. ಮಂಜೂರು ಮಾಡುವ ಸಂಬಂಧದಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಹಂತದಲ್ಲಿ, ಉಲ್ಲೇಖ (1)ರ ಸರ್ಕಾರಿ ಆದೇಶದ ನಿಯಮ 20.03.2 ರಂತೆ ವಿಭಾಗದ ಮುಖ್ಯಸ್ಥರು ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಯನ್ನೊಳಗೊಂಡಂತೆ ಸಮಿತಿಯನ್ನು ರಚಿಸಿಕೊಂಡು ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಬಂಧಿಸಿದಂತೆ ಟೇಬಲ್-1, ದೈಹಿಕ ಶಿಕ್ಷಣ ಬೋಧಕರುಗಳಿಗೆ ಸಂಬಂಧಿಸಿದಂತೆ ಟೇಬಲ್-4 ಹಾಗೂ ಗ್ರಂಥಪಾಲಕರುಗಳಿಗೆ ಸಂಬಂಧಿಸಿದಂತೆ ಟೇಬಲ್-7ರ (Category-1,2,3) ನಮೂನೆ, ಪ್ರಮಾಣ ಪತ್ರಗಳು ಹಾಗೂ ದಾಖಲಾತಿಗಳನ್ನು ಟೇಬಲ್-2, 5(ಬಿ), 8(ಬಿ) ಮತ್ತು ಟೇಬಲ್-3, 6, 9 ಗಳ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ, ಎ.ಪಿ.ಐ. ಅಂಕಗಳನ್ವಯ ಉನ್ನತ ಎ.ಜಿ.ಪಿ.ಗೆ ಅರ್ಹರಿರುವವರ ಮಾಹಿತಿಗಳನ್ನು ಮಾತ್ರ ನಿಗದಿತ ನಮೂನೆ-1 ಮತ್ತು 2 ರಲ್ಲಿ ಸಮಿತಿಯ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸುವಂತೆ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸಲಾಗಿದೆ. ಈ ಪ್ರಕಾರವಾಗಿ ಪ್ರಾಂಶುಪಾಲರ ಹಂತದ ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ಉನ್ನತ ಎ.ಜಿ.ಪಿ.ಯ ಸ್ಥಾನೀಕರಣಕ್ಕಾಗಿ ಶಿಫಾರಸ್ಸು ಮಾಡಿ ಪ್ರಸ್ತಾವನೆಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಸಂಬಂಧಿಸಿದ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ತೀರ್ಮಾನದಂತೆ ಉನ್ನತ ಎ.ಜಿ.ಪಿ ಮಂಜೂರು ಮಾಡಲು ಈ ಆದೇಶ.

**<u>ಆದೇಶ ಸಂಖ್ಯೆ:ಕಾಶಿಇ/40/ಎಜಿಪಿ/ಬಡ್ತಿ/ಬಸ್ಥಾವಿ/2020-21 ಬೆಂಗಳೂರು, ದಿನಾಂಕ: 4. 1 .2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖ-4 ರ ದಿನಾಂಕ : 25.09.2014ರ ಸರ್ಕಾರಿ ಆದೇಶದಂತೆ ಸಂಬಂಧಿಸಿದ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ, ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ತೀರ್ಮಾನದಂತೆ, <u>ಒಟ್ಟು 27</u> ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ರೂ.6000/- ರಿಂದ ರೂ.7000/- ಉನ್ನತ ಎ.ಜಿ.ಪಿಯನ್ನು 2006ರ ಹಾಗೂ 2016ರ ಯು.ಜಿ.ಸಿ. ವೇತನರಲ್ಲಿ ಕೆಳಕಂಡ ಷರತ್ತುಗಳಿಗೊಳಪಟ್ಟು ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಜಾರಿಯಾಗುವಂತೆ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

<u>ಷರತ್ತುಗಳು</u> :

1. 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿನ ಎ.ಪಿ.ಐ ಅಂಕಗಳ ಆಧಾರಿತ ಎ.ಜಿ.ಪಿ ಮಂಜೂರಾತಿಯು ಉಲ್ಲೇಖ (1) ರಿಂದ (4) ರವರೆಗಿನ ಯುಜಿಸಿ/ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

2. APPENDIX-III, Table-I, IV, VII (Category I, II & III) ರಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಸಂಬಂಧಿಸಿದ <u>ಪ್ರಾಂಶುಪಾಲರ ಹಂತದ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ಮಾಡಿರುವುದರಿಂದ ಎ.ಜಿ.ಪಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಸಂಪೂರ್ಣ ಜವಾಬ್ದಾರಿ ಸಮಿತಿಯದ್ದಾಗಿರುತ್ತದೆ. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು. ತಪ್ಪು ಮಾಹಿತಿ ಒದಗಿಸಿದ ಉಪನ್ಯಾಸಕರು ಹಾಗೂ ಶಿಫಾರಸ್ಸು ಮಾಡಿದ ಪ್ರಾಂಶುಪಾಲರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.</u>

3. ಸರ್ಕಾರಿ ಆದೇಶ ಸಂಖ್ಯೆ: ಇಡಿ-483-ಯುಎನ್‌ಇ-2017 ದಿನಾಂಕ: 16.03.2019 ಹಾಗೂ ಸರ್ಕಾರದ ಪತ್ರ ಸಂಖ್ಯೆ: ಇಡಿ-483-ಯುಎನ್‌ಇ-2017 ದಿನಾಂಕ: 21.10.2019ರ ಸರ್ಕಾರದ ಪತ್ರದ ಅನುಸಾರ ದಿನಾಂಕ: 01.01.2016 ರಿಂದ 31.03.2019ರ ಅವಧಿಯಲ್ಲಿ ವೃತ್ತಿಪದೋನ್ನತಿ ಅಡಿಯಲ್ಲಿ ಎ.ಜಿ.ಪಿ ಆರ್ಥಿಕ ಸೌಲಭ್ಯ ಹೊಂದುವವರು ದಿನಾಂಕ: 01.04.2019 ರಿಂದ ಆರ್ಥಿಕ ಸೌಲಭ್ಯ ಪಡೆಯಲು ಅರ್ಹರಾಗಿದ್ದು, ಅದರನ್ವಯ ಆರ್ಥಿಕ ಸೌಲಭ್ಯದ ದಿನಾಂಕವನ್ನು ನಿಗಧಿಪಡಿಸಲಾಗಿದೆ.

4. ಉಲ್ಲೇಖ (5) ಹಾಗೂ (6)ರನ್ವಯ<u>ಎಂ.ಫಿಲ್/ಪಿಹೆಚ್.ಡಿ. ಪದವಿಯನ್ನು "ನೇಮಕಾತಿಗೆ" ಅಥವಾ "ವಿಶೇಷ ಮುಂಗಡ ವೇತನ ಬಡ್ತಿ" ಗೆ ಇವುಗಳಲ್ಲಿ ಯಾವುದಾದರೂ ಒಂದು ಸೌಲಭ್ಯಕ್ಕೆ ಪರಿಗಣಿಸಿದ್ದಲ್ಲಿ ನಂತರ ಸದರಿ ಎಂ.ಫಿಲ್/ಪಿಹೆಚ್.ಡಿ. ಪದವಿಯನ್ನು ಸಿ.ಎ.ಎಸ್‌ರಡಿಯಲ್ಲಿ "ಉನ್ನತ ಎ.ಜಿ.ಪಿ" ಸೌಲಭ್ಯಕ್ಕೆ ಹಾಗೂ "ಸೇವಾವಧಿಯ ವಿನಾಯಿತಿ"ಗೆ ಪರಿಗಣಿಸಲು ಅವಕಾಶವಿರುವುದಿಲ್ಲ.</u> ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಉನ್ನತ ಎ.ಜಿ.ಪಿ.ಗೆ ಶಿಫಾರಸ್ಸು ಮಾಡುವ ಜವಾಬ್ದಾರಿ ಸಮಿತಿಯದ್ದಾಗಿದ್ದು, ಈ ಆದೇಶದನ್ವಯ ಉನ್ನತ ಎ.ಜಿ.ಪಿ ಮಂಜೂರು ಮಾಡಿರುವ ಪ್ರಕರಣಗಳಲ್ಲಿ ಯಾವುದೇ ಸಹಾಯಕ ಪ್ರಾಧ್ಯಾಪಕರುಗಳು ಎಂ.ಫಿಲ್/ಪಿ.ಹೆಚ್.ಡಿಯನ್ನು ವಿಶೇಷ ಮುಂಗಡ ವೇತನ ಬಡ್ತಿ ಮತ್ತುಎ.ಜಿ.ಪಿ ಎರಡೂ ಸೌಲಭ್ಯಗಳನ್ನು ಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಒಂದೊಮ್ಮೆ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಸದರಿ ಸೌಲಭ್ಯವನ್ನು ಹಿಂಪಡೆಯುವ ಹಾಗೂ ಪಡೆಯಲಾಗಿರುವ ಆರ್ಥಿಕ ಸೌಲಭ್ಯಗಳನ್ನು ಹಿಂಪಡೆದು ಶಿಸ್ತು ಕ್ರಮವನ್ನು ಜರುಗಿಸಲಾಗುವುದು.

5. ಎ.ಜಿ.ಪಿ.ಗೆ ಸೇವಾ ವಿನಾಯಿತಿ ಪಡೆದಿರುವ ಸಹಾಯಕ ಪ್ರಾಧ್ಯಾಪಕರಿಂದ ಮುಂಗಡ ವೇತನ ಬಡ್ತಿ ಸೌಲಭ್ಯ ಪಡೆದಿರುವುದಿಲ್ಲವೆಂಬ ಬಗ್ಗೆ ಹಾಗೂ ಮುಂದೆಯೂ ಪಡೆಯುವುದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು. ಹಾಗೂ ದೃಢೀಕರಣದ ವಿವರಗಳನ್ನು ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು. ಸದರಿ ಪತ್ರದ ದೃಢೀಕೃತ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

6. ಎಂ.ಫಿಲ್/ಪಿಹೆಚ್.ಡಿ. ಪ್ರಯುಕ್ತ ಮುಂಗಡ ವೇತನ ಬಡ್ತಿ ಮಂಜೂರಾಗಿದ್ದಲ್ಲಿ ಅಥವಾ ಮುಂಗಡ ವೇತನ ಬಡ್ತಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಸದರಿ ಆದೇಶ/ಪ್ರಕ್ರಿಯೆರದ್ದುಗೊಂಡ ನಂತರ ಉನ್ನತ ಎ.ಜಿ.ಪಿ.ಗಾಗಿ ಸೇವಾ ವಿನಾಯಿತಿಗೆ ಪರಿಗಣಿಸಬೇಕಾಗಿರುತ್ತದೆ.

7. ಈ ಕಛೇರಿಯ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಸಹಾಯಕ ಪ್ರಾಧ್ಯಾಪಕರುಗಳ ಖಾಯಂ ನೇಮಕಾತಿ ದಿನಾಂಕ, <u>ಯು.ಜಿ.ಸಿ. ವೇತನ ನಿಗಧೀಕರಣದ ದಿನಾಂಕ, ಸೇವಾ ಪೂರ್ವ ಅವಧಿಯ ಘೋಷಣೆ ದಿನಾಂಕ, ವೇತನ ರಹಿತ ರಜೆ/ಅನಧಿಕೃತ ಗೈರು ಹಾಜರಿ, ಇಲಾಖಾ ವಿಚಾರಣೆ/ಶಿಸ್ತು ಕ್ರಮದ ಬಗ್ಗೆ ಮಾಹಿತಿ, ನಿಗದಿತ ರೆಫ್ರೆಷರ್/ಓರಿಯಂಟೇಷನ್ ಕೋರ್ಸ್‌ಗಳನ್ನು ಪೂರೈಸಿರುವುದು ಹಾಗೂ ಇನ್ನಿತರೆ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಸಮಿತಿಯು ಪರಿಶೀಲಿಸಿರುವ ಷರತ್ತಿಗೊಳಪಟ್ಟಿರುತ್ತದೆ.</u>

8. ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಉನ್ನತ ಎ.ಜಿ.ಪಿ ಪ್ರಸ್ತಾವನೆಗಳನ್ನು ಸಂಬಂಧಿಸಿದ ಕಾಲೇಜಿನ ಹಂತದ ಸಮಿತಿಯ ಪರಿಶೀಲನೆಯ ನಂತರ ಪ್ರಸ್ತಾವನೆ, ಸಮಿತಿಯ ಶಿಫಾರಸ್ಸು, ಎ.ಜಿ.ಪಿ ಮಂಜೂರಾತಿ ಆದೇಶ ಹಾಗೂ ಇನ್ನಿತರೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಕಾಲೇಜಿನಲ್ಲಿ ಸಂರಕ್ಷಿಸಲು ತಿಳಿಸಲಾಗಿದೆ. ಈ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು /ಗ್ರಂಥಪಾಲಕರುಗಳಿಗೆ ಮುಂದೆ ಸಹ ಪ್ರಾಧ್ಯಾಪಕರ ಹಂತದ (Associate Professor) ವೃತ್ತಿ ಪದೋನ್ನತಿ ಮಂಜೂರು ಮಾಡುವ ಸಂಬಂಧದಲ್ಲಿ "ಇಲಾಖಾ ಪರಿಶೀಲನಾ ಸಮಿತಿ"ಯ (Screening-cum-Evaluation Committee) ಕಾಲೇಜಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸದರಿ ದಾಖಲಾತಿಗಳನ್ನು ಸಮಿತಿಯ ಪರಿಶೀಲನೆಗೆ ಮಂಡಿಸಬೇಕಾಗಿರುತ್ತದೆ. ಆದುದರಿಂದ ಎ.ಜಿ.ಪಿ ಮಂಜೂರಾತಿಗೆ ಸಂಬಂಧಿಸಿದಂತೆ ಯಾವುದೇ ತಪ್ಪು ಮಾಹಿತಿಗಳನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರು ಹಾಗೂ ಪ್ರಾಂಶುಪಾಲರ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.

9. ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಾತಿಗೊಂಡಿರುವ ಉಪನ್ಯಾಸಕರು ಯು.ಜಿ.ಸಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು (NET/SLET/M.PHIL/PH.D) ಪಡೆದಿರುವ ದಿನಾಂಕದಿಂದ ಮಾತ್ರ (Issue of Certificate Date) ಯು.ಜಿ.ಸಿ ವೇತನ ಶ್ರೇಣಿ ನಿಗದಿಪಡಿಸಲಾಗಿದ್ದು, ಅದರಂತೆ ಎ.ಜಿ.ಪಿ. ಮಂಜೂರಾತಿಗಾಗಿ ಪರಿಗಣಿಸಲಾಗಿದೆ. ಸದರಿ ದಿನಾಂಕದ ಬಗ್ಗೆ ಪ್ರಾಂಶುಪಾಲರು ಮತ್ತೊಮ್ಮೆ ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

10. ಎನ್.ಇ.ಟಿ/ಎಸ್.ಎಲ್.ಇ.ಟಿ. ವಿದ್ಯಾರ್ಹತೆಯನ್ನು ಪಡೆದಿರಲಿ ಅಥವಾ ಪಡೆಯದೇ ಇರಲಿ ಇಂತಹ ಯಾವುದೇ ಸಹಾಯಕ ಪ್ರಾಧ್ಯಾಪಕರು ನಿಗಧಿತ ಅವಧಿಯೊಳಗೆ ಎಂ.ಫಿಲ್ ಹಾಗೂ ಪಿ.ಹೆಚ್.ಡಿ. ಈ ಎರಡೂ ಪದವಿಗಳನ್ನು ಪಡೆದಿದ್ದಲ್ಲಿ, ಈ ಪೈಕಿ ಎಂ.ಫಿಲ್‌ಅಥವಾ ಪಿಹೆಚ್.ಡಿ.ಗಳಲ್ಲಿ ಒಂದು ಪದವಿಯನ್ನು ನೇಮಕಾತಿಗೆಅಥವಾ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಕ್ಕೆ ಪರಿಗಣಿಸಿದ್ದಲ್ಲಿ ಇನ್ನೊಂದು ಪದವಿಯನ್ನು ಎ.ಜಿ.ಪಿ.ಯಲ್ಲಿನ ಸೇವಾ ವಿನಾಯಿತಿಗೆ ಪರಿಗಣಿಸಲಾಗುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲಾಗಿದೆ. ಈ ಸಂಬಂಧದಲ್ಲಿ ಸರ್ಕಾರದಿಂದ ಹೊರಡಿಸಬಹುದಾದ ಆದೇಶ/ಮಾರ್ಗದರ್ಶನದನ್ವಯ ಕ್ರಮ ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

11. ದೂರ ಶಿಕ್ಷಣ ಮುಖೇನ (Distance Mode) ಎಂ.ಫಿಲ್ ಪಡೆದಿರುವ ಅಭ್ಯರ್ಥಿಗಳ ಆಯ್ಕೆ ಪ್ರಕರಣವು ಸರ್ವೋಚ್ಛ ನ್ಯಾಯಾಲಯದಲ್ಲಿ (ಎಸ್.ಎಲ್.ಪಿ ಸಂಖ್ಯೆ:35608-20/2013 ಮತ್ತು 36714-736-2013) ದಾಖಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ಕ್ರಮಕ್ಕೈಗೊಳ್ಳುವ ಹಾಗೂ ದೂರ ಶಿಕ್ಷಣದ ಮುಖೇನ ಪಡೆದಿರುವ ಎಂ.ಫಿಲ್, ಪಿ.ಹೆಚ್.ಡಿ ಪದವಿಗಳ ಮಾನ್ಯತೆಗೆ ಸಂಬಂಧಿಸಿದಂತೆ ಸರ್ಕಾರದ ಕಾನೂನು ಇಲಾಖೆಯಆದೇಶ/ ಸೂಚನೆಯನ್ವಯ ಕ್ರಮಕ್ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

12. ಎ.ಜಿ.ಪಿ ಮಂಜೂರಾತಿಯು ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

13. ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿ (ಸಿ.ಎ.ಎಸ್-ಎ.ಜಿ.ಪಿ) ಯನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲುಅವಕಾಶವಿರುವುದಿಲ್ಲ.

14. ಈ ಆದೇಶದನ್ವಯ ಮಂಜೂರು ಮಾಡಲಾದ ಎ.ಜಿ.ಪಿ.ಯು ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತೆಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕ್ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

15. ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಎ.ಜಿ.ಪಿ ಮಂಜೂರಾತಿಯ ವಿವರಗಳನ್ನು ಸಂಬಂಧಪಟ್ಟ ನೌಕರರ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು.

16. ಎ.ಜಿ.ಪಿ ಮಂಜೂರಾತಿಆದೇಶದ ಮೇರೆಗೆ ಪ್ರಾಂಶುಪಾಲರುಗಳು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ವೇತನ ನಿಗದೀಕರಣಕ್ಕಾಗಿ ಅಗತ್ಯ ಪ್ರಸ್ತಾವನೆಯನ್ನು ಮಹಾಲೇಖಪಾಲರಕಛೇರಿಗೆ ಕಳುಹಿಸುವ ಬಗ್ಗೆ ಕ್ರಮಕೈಗೊಳ್ಳತಕ್ಕದ್ದು.

ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಹಾಗೂ ತಿದ್ದುಪಡಿ ನಿಯಮಗಳು 2015ರನ್ವಯ ಸರ್ಕಾರಿ ನೌಕರರು ಸರ್ಕಾರದಿಂದ ನಿಗದಿಪಡಿಸಲಾಗಿರುವ ಅಧಿಕೃತ ಏಜೆನ್ಸಿಯಿಂದ (KEONICS) ನಡೆಸಲಾಗುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗಿರುತ್ತದೆ. ಆದುದರಿಂದ ಈ ಆದೇಶದಲ್ಲಿ ಎ.ಜಿ.ಪಿ. ಮಂಜೂರಾಗಿರುವ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು. ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಹಾಗೂ ಈ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಸಲ್ಲಿಸುವಂತಹ ಪ್ರಮಾಣ ಪತ್ರಗಳನ್ನು ಅವರುಗಳ ಎ.ಜಿ.ಪಿ. ದಾಖಲಾತಿಗಳೊಂದಿಗೆ ಕಾಲೇಜಿನಲ್ಲಿ ಸಂರಕ್ಷಿಸಿಡುವಂತೆ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಆಯುಕ್ತರು
ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ

File-40-AGP-2020 (7000)

ಇವರಿಗೆ:

1. ಮಹಾಲೇಖಪಾಲರು, GE IV A (ಎ & ಇ),ಕರ್ನಾಟಕ ರಾಜ್ಯ, ಬೆಂಗಳೂರು-560 001 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ. ಮೇಲ್ಕಂಡ ಆದೇಶವನ್ನು ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ ಹಾಗೂ ಅನುಬಂಧದಲ್ಲಿನ ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳು ಉನ್ನತಎ.ಜಿ.ಪಿ.ಗೆ ವರದಿ ಮಾಡಿಕೊಂಡ ಬಗ್ಗೆ ಸಿ.ಟಿ.ಸಿ., ಅಂತಿಮ ವೇತನ ಪ್ರಮಾಣ ಪತ್ರಗಳೊಂದಿಗೆ ವೇತನ ನಿಗದೀಕರಣಕ್ಕಾಗಿ ಅವರ ಸೇವಾ ಪುಸ್ತಕದೊಂದಿಗೆ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ, ಬೆಂಗಳೂರು-560 001 ಇವರಿಗೆ ಕಳುಹಿಸಿ ಕೊಡುವಂತೆ ಸೂಚಿಸಲಾಗಿದೆ.
3. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯವಿದ್ದಲ್ಲಿ ಸೂಕ್ತ ಕ್ರಮಕ್ಕಾಗಿ
4. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಆದೇಶ ಹಾಗೂ ಅನುಬಂಧವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು -560 001 – ಮಾಹಿತಿಗಾಗಿ.
2. ವ್ಯವಸ್ಥಾಪಕರು/ಅಧೀಕ್ಷಕರು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
3. ವ್ಯವಸ್ಥಾಪಕರು/ಅಧೀಕ್ಷಕರು, ಸೇವಾ ವಿಭಾಗ-1, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
4. ಕಛೇರಿ ಪ್ರತಿ.

ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ 01

## ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿಯಡಿ ರೂ.6000/- ರಿಂದ ರೂ.7000/- ಎ.ಜಿ.ಪಿ ನಿಗಧಿಪಡಿಸಲಾಗಿರುವ ಪಟ್ಟಿ

ಸಂಖ್ಯೆ : ಕಾಶಿಇ/40/ಎಜಿಪಿ/2019-20/ಬಸ್ಥಾವಿ ದಿನಾಂಕ: 4-1-2021

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಸೇವೆಗೆ ಹಾಜರಾದ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ಸೇವಾ ಪೂರ್ವ ಅವಧಿ ಪೂರೈಸಿದ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | | | ಷರಾ |
|---|---|---|---|---|---|---|---|---|---|---|---|---|
| | | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಓ.ಸಿ ಪೂರೈಸಿದ ದಿನಾಂಕ | ಆರ್.ಸಿ ಪೂರೈಸಿದ ದಿನಾಂಕ | ಆರ್ಥಿಕ ಸೌಲಭ್ಯವನ್ನು ಮಂಜೂರಾತಿ ದಿನಾಂಕ | |
| 1 | 2 | 3 | 4 | 5 | 7 | 8 | 9 | 10 | 11 | 12 | 13 | 14 |
| 1 | ರಮೇಶ್ ಕೆ ವಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ | 03-11-2003 | 22-12-2007 | 03-11-2005 | 7000 | 22-12-2013 | 05-09-2004 | 01-12-2007 | 22-12-2013 | --------- |
| 2 | ಕೃಷ್ಣ ಡಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ | 12-07-2003 | 09-11-2006 | 12-07-2005 | 7000 | 09-11-2012 | 05-09-2004 | 14-02-2007 | 09-11-2012 | --------- |
| 3 | ಡಾ ಬೋಪಯ್ಯ ಟಿ ಕೆ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿರಾಜಪೇಟೆ | 23-07-2003 | 18-02-2008 | 23-07-2005 | 7000 | 18-02-2014 | 16-06-2004 | 17-12-2011 | 18-02-2014 | --------- |
| 4 | ಕರಿಬಸವಯ್ಯ ಹೆಚ್ ಎಸ್ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು | 12-07-2003 | 10-09-2007 | 12-07-2005 | 7000 | 10-09-2013 | 29-10-2004 | 07-07-2013 | 10-09-2013 | --------- |
| 5 | ಬಸಪಟ್ಟಣ ಎಸ್ ಎ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಳಗಿ ಕಲಬುರಗಿ | 14-03-2003 | 26-06-2008 | 14-07-2005 | 7000 | 26-06-2014 | 06-11-2003 | 08-01-2009 | 26-06-2014 | --------- |
| 6 | ಆರ್ ಎಂ ಶ್ರೀದೇವಿ | ಇತಿಹಾಸ | ಸ.ಸ.ಅ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯುತ್ತ) ಬಳ್ಳಾರಿ | 14-07-2003 | 22-12-2007 | 14-07-2005 | 7000 | 22-12-2013 | 31-12-2004 | 14-03-2010 | 22-12-2013 | --------- |

## ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿಯಡಿ ರೂ.6000/- ರಿಂದ ರೂ.7000/- ಎ.ಜಿ.ಪಿ ನಿಗಧಿಪಡಿಸಲಾಗಿರುವ ಪಟ್ಟಿ

ಸಂಖ್ಯೆ : ಕಾಶಿಇ/40/ಎಜಿಪಿ/2019-20/ಬಸ್ಥಾಪಿ ದಿನಾಂಕ: 4-1-2021

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಸೇವೆಗೆ ಹಾಜರಾದ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿದ ದಿನಾಂಕ | ಸೇವಾ ಮೊದಲ ಅವಧಿ ಪೂರೈಸಿದ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | | | ಷರಾ |
|---|---|---|---|---|---|---|---|---|---|---|---|---|
| | | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಓ.ಸಿ ಪೂರೈಸಿದ ದಿನಾಂಕ | ಆರ್.ಸಿ ಪೂರೈಸಿದ ದಿನಾಂಕ | ಆರ್ಥಿಕ ಸೌಲಭ್ಯವನ್ನು ಮಂಜೂರಾತಿ ದಿನಾಂಕ | |
| 1 | 2 | 3 | 4 | 5 | 7 | 8 | 9 | 10 | 11 | 12 | 13 | 14 |
| 7 | ಡಾ ದೊಡ್ಮನಿ ಶ್ರೀನಿವಾಸರಾವ್ | ಅರ್ಥಶಾಸ್ತ್ರ | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಯಾದಗಿರಿ | 31-10-2003 | 22-12-2007 | 31-10-2005 | 7000 | 22-12-2013 | 16-07-2005 | 07-09-2007 | 22-12-2013 | ---------- |
| 8 | ಹಸೀಬಾ ಖಾನಂ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಸಿರಾ | 11-07-2003 | 16/02/2008 | 10-07-2005 | 7000 | 16/02/2014 | 05-04-2004 | 14-02-2011 | 16/02/2014 | ---------- |
| 9 | ಹೇಮಲತ ಬಿ ಆರ್ | ಇಂಗ್ಲೀಷ್ | ಸರ್ಕಾರಿ ಪ್ರಥಮ ದರ್ಜೆ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಸಿರಾ | 11-07-2003 | 14/02/2008 | 11-07-2005 | 7000 | 14/02/2014 | 03-08-2004 | 16-05-2011 | 14/02/2014 | ---------- |
| 10 | ಅಶೋಕ ಬಿ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾವೂರು, ಮಂಗಳೂರು | 14/07/2003 | 07/10/2008 | 21-04-2006 | 7000 | 07/10/2014 | 29-10-2004 | 09-08-2012 | 07-10-2014 | ---------- |
| 11 | ಹೊಸಮನಿ ಮಾಪಣ್ಣ | ಇತಿಹಾಸ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಹಗಾಂವ ಕ್ರಾಸ ಕಲಬುರಗಿ | 03/11/2003 | 10/01/2008 | 03-08-2007 | 7000 | 10/01/2014 | 10-03-2004 | 02-03-2009 | 10/01/2014 | ---------- |
| 12 | ಡಾ ವೆಂಕಟೇಶಯ್ಯ ಎಂ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು | 11/07/2003 | 16/11/2007 | 03-08-2007 | 7000 | 16/11/2013 | 29-10-2004 | 18-11-2009 | 16/11/2013 | ---------- |

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿಯಡಿ ರೂ.6000/- ರಿಂದ ರೂ.7000/- ಎ.ಜಿ.ಪಿ ನಿಗಧಿಪಡಿಸಲಾಗಿರುವ ಪಟ್ಟಿ

ಸಂಖ್ಯೆ : ಕಾಶಿಇ/40/ಎಜಿಪಿ/2019-20/ಬಸ್ಥಾವಿ ದಿನಾಂಕ: 4-1-2021

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಸೇವೆಗೆ ಹಾಜರಾದ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ಸೇವಾ ಪೂರ್ವ ಅವಧಿ ಪೂರೈಸಿದ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | | | ಷರಾ |
|---|---|---|---|---|---|---|---|---|---|---|---|---|
| | | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಓ.ಸಿ ಪೂರೈಸಿದ ದಿನಾಂಕ | ಆರ್.ಸಿ ಪೂರೈಸಿದ ದಿನಾಂಕ | ಆರ್ಥಿಕ ಸೌಲಭ್ಯವನ್ನು ಮಂಜೂರಾತಿ ದಿನಾಂಕ | |
| 1 | 2 | 3 | 4 | 5 | 7 | 8 | 9 | 10 | 11 | 12 | 13 | 14 |
| 13 | ಯಂಕಪ್ಪ ನೀರಡಗಿ | ರಾಜ್ಯಶಾಸ್ತ್ರ | ಸರ್ಕಾರಿ ಮಹಾವಿದ್ಯಾಲಯ ಕಲಬುರಗಿ | 07/11/2003 | 18/02/2008 | 07-11-2005 | 7000 | 18/02/2014 | 05-09-2004 | 22-07-2008 | 18/02/2014 | --------- |
| 14 | ಚನ್ನಬಸಯ್ಯ ಟಿ ಹಿರೇಮಠ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸಗಿ (ಜ) ಯಾದಗಿರಿ | 20-10-2004 | 18-02-2008 | 20-10-2006 | 7000 | 18-02-2014 | 17-03-2005 | 25-10-2008 | 18-02-2014 | --------- |
| 15 | ಬಸವರಾಜ ಎಸ್ ಕೆ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೂಡ್ಲಿಗಿ, ಬಳ್ಳಾರಿ ಜಿಲ್ಲೆ | 14-07-2003 | 11-09-2006 | 14-07-2005 | 7000 | 11-09-2012 | 18-03-2004 | 25-11-2008 | 11-09-2012 | --------- |
| 16 | ಕೊಳ್ಳ ಶಶಿಕಾಂತ | ವಾಣಿಜ್ಯಶಾಸ್ತ್ರ | ಸರ್ಕಾರಿ ಮಹಾವಿದ್ಯಾಲಯ ಕಲಬುರಗಿ | 05/11/2003 | 21/09/2008 | 05-11-2005 | 7000 | 21/09/2014 | 05-01-2005 | 01-04-2009 | 21/09/2014 | --------- |
| 17 | ಅನಿತಾಜೇನ್ ಜೆ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪೀಣ್ಯಾ, ಬೆಂಗಳೂರು | 31/10/2003 | 30/07/2007 | 27-08-2010 | 7000 | 30/07/2013 | 05-09-2004 | 14-02-2007 | 30/07/2013 | --------- |

## ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿಯಡಿ ರೂ.6000/- ರಿಂದ ರೂ.7000/- ಎ.ಜಿ.ಪಿ ನಿಗಧಿಪಡಿಸಲಾಗಿರುವ ಪಟ್ಟಿ

ಸಂಖ್ಯೆ : ಕಾಶಿಇ/40/ಎಜಿಪಿ/2019-20/ಬಸ್ಥಾವಿ ದಿನಾಂಕ: 4-1-2021

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಸೇವೆಗೆ ಹಾಜರಾದ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ಸೇವಾ ಪೂರ್ವ ಅವಧಿ ಪೂರೈಸಿದ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | | | ಷರಾ |
|---|---|---|---|---|---|---|---|---|---|---|---|---|
| | | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಓ.ಸಿ ಪೂರೈಸಿದ ದಿನಾಂಕ | ಆರ್.ಸಿ ಪೂರೈಸಿದ ದಿನಾಂಕ | ಆರ್ಥಿಕ ಸೌಲಭ್ಯವನ್ನು ಮಂಜೂರಾತಿ ದಿನಾಂಕ | |
| 1 | 2 | 3 | 4 | 5 | 7 | 8 | 9 | 10 | 11 | 12 | 13 | 14 |
| 18 | ವೀರಯ್ಯಾ ಎಂ ಹೀರೆಮಠ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು.ಶಹಾಪುರ. ಯಾದಗಿರಿ ಜಿಲ್ಲೆ | 21/07/2003 | 22/04/2008 | 21-07-2005 | 7000 | 22/04/2014 | 18-03-2004 | 05-02-2009 | 22/04/2014 | ---------- |
| 19 | ಡೋಂಗರಗಾಂವಕರ್ ಶರದ ಕೆ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಆಳಂದ | 05/03/2003 | 06/12/2007 | 20-04-2006 | 7000 | 06/12/2013 | 05-04-2004 | 18-04-2013 | 06/12/2013 | ---------- |
| 20 | ನಿಂಗಪ್ಪ ಪೂಜಾರಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಆಳಂದ | 03/11/2003 | 26-07-2009 | 07-11-2008 | 7000 | 26-07-2015 | 03-11-2004 | 13-02-2012 | 26-07-2015 | ---------- |
| 21 | ರಾಠೋಡ ದೇವಿಚಂದ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಆಳಂದ | 03/11/2003 | 10-01-2008 | 03-11-2005 | 7000 | 10-01-2014 | 10-03-2004 | 25-10-2008 | 10-01-2014 | ---------- |
| 22 | ಡಾ ಗಾಯಿತ್ರಿದೇವಿ ಕೆ ಎಂ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಕಲಬುರಗಿ | 15-07-2003 | 16-09-2006 | 15-07-2005 | 7000 | 15-07-2012 | 17-03-2005 | 26-09-2006 | 15-07-2012 | ---------- |
| 23 | ಡಾ ವಿದ್ಯಾವತಿ ಚಕ್ಕಿ | ರಾಜ್ಯಶಾಸ್ತ್ರ | ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ-ಕಾಲೋನಿ. ಕಲಬುರಗಿ | 16-07-2003 | 07-01-2008 | 16-07-2005 | 7000 | 07-01-2014 | 28-08-2003 | 30-08-2007 | 07-01-2014 | ---------- |

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿಯಡಿ ರೂ.6000/- ರಿಂದ ರೂ.7000/- ಎ.ಜಿ.ಪಿ ನಿಗಧಿಪಡಿಸಲಾಗಿರುವ ಪಟ್ಟಿ

ಸಂಖ್ಯೆ : ಕಾಶಿಇ/40/ಎಜಿಪಿ/2019-20/ಬಸ್ಥಾಪಿ ದಿನಾಂಕ: 4.1.2021

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಸೇವೆಗೆ ಹಾಜರಾದ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ಸೇವಾ ಜೊತೆ ಅವಧಿ ಪೂರೈಸಿದ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | | | ಷರಾ |
|---|---|---|---|---|---|---|---|---|---|---|---|---|
| | | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಓ.ಸಿ ಪೂರೈಸಿದ ದಿನಾಂಕ | ಆರ್.ಸಿ ಪೂರೈಸಿದ ದಿನಾಂಕ | ಆರ್ಥಿಕ ಸೌಲಭ್ಯವನ್ನು ಮಂಜೂರಾತಿ ದಿನಾಂಕ | |
| 1 | 2 | 3 | 4 | 5 | 7 | 8 | 9 | 10 | 11 | 12 | 13 | 14 |
| 24 | ಹೊನ್ನೂರಾಲಿ ಐ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕಾ | 07-10-2004 | 11-09-2006 | 07-10-2006 | 7000 | 11-09-2010 | 14-04-2005 | 05-12-2009 | 11-09-2010 | ---------- |
| 25 | ವಾಟಕರ ಅಶೋಕ | ಅರ್ಥಶಾಸ್ತ್ರ | ಸರ್ಕಾರಿ ಪದವಿ ಮಹಾವಿದ್ಯಾಲಯ, ಯಾದಗಿರಿ | 14/07/2003 | 18/02/2008 | 27-08-2010 | 7000 | 18/02/2014 | 17-03-2004 | 18-02-2009 | 18/02/2014 | ---------- |
| 26 | ರಮೇಶ ಎಂ.ಎಲ್ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು | 03/11/2003 | 05-09-2007 | 03-08-2007 | 7000 | 05-09-2013 | 05-09-2004 | 21-08-2007 | 05-09-2013 | ---------- |
| 27 | ಗೀತಾ.ಎನ್.ಎ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ | 28-06-2010 | 28-06-2010 | 28-06-2012 | 7000 | 28-06-2016 | 29-12-2011 | 29-01-2013 | 01-04-2019 | ಸರ್ಕಾರಿ ಆದೇಶ ಸಂಖ್ಯೆ: ಇಡಿ/483/ಯುಎನ್ಇ/2017 ದಿನಾಂಕ: 16.03.2019 ಹಾಗೂ ಸಮ ಸಂಖ್ಯೆಯ ದಿನಾಂಕ: 21.10.2019ರ ಸರ್ಕಾರದ ಪತ್ರದನ್ವಯ ಆರ್ಥಿಕ ಸೌಲಭ್ಯವನ್ನು ದಿನಾಂಕ: 01-04-2019 ರಿಂದ ಮಂಜೂರು ಮಾಡಲಾಗಿದೆ. |

ಆಯುಕ್ತರು
ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ